ಮೂಲ ದಾವಾ ಸಂಖ್ಯೆ 3/2019

ಪಿ.ಡಬ್ಲ್ಯೂ-1

**ದಿಃ 18.10.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಕೆ ಬಿ ಆರ್ ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿವೆ ಮತ್ತು ಪ್ರಮಾಣ ಪತ್ರದಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ದಾವಾ ಆಸ್ತಿಗೆ ಸಂಬಂಧಪಟ್ಟ ಒಟ್ಟು 10 ಆರ್ ಟಿ ಸಿ ಗಳನ್ನು ನಿ ಪಿ 1 ರಿಂದ 10 ಎಂದು, ಮನೆ ಆಸ್ತಿಗೆ ಸಂಬಂಧಪಟ್ಟಂತೆ ಎರಡು ಖಾತಾ ಉತಾರುಗಳನ್ನು ನಿ ಪಿ 11 ಮತ್ತು 12 ಎಂದು, ಗುರುಬಸಯ್ಯ ರವರ ಮರಣ ಪ್ರಮಾಣ ಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 13 ಎಂದು, ಸೌಭಾಗ್ಯಮ್ಮ ಇವರ ಮರಣ ಪ್ರಮಾಣ ಪತ್ರ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 14 ಎಂದು, ಉಪ ವಿಭಾಗಧಿಕಾರಿಗಳ ನ್ಯಾಯಾಲಯ ಇವರ ಆರ್ ಎ ಸಿ ಆರ್ 7/2016 ರ ಆದೇಶದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 15 ಎಂದು, ಗುರುತಿಸಲಾಯಿತು. ಜಿಲಾಧಿಕಾರಿಗಳ ನ್ಯಾಯಾಲಯದಲಿ ಆರ್ ಎ ನಂಬರ 17/2018-19 ರಂತೆ ಅಪೀಲು ಸಲ್ಲಿಸಿದ್ದು ಸದರಿ ಅಪೀಲಿನ ಆದೇಶದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ ಪಿ 16 ಎಂದು ಗುರುತಿಸಲಾಯಿತು.

**(ಮುಂದುವರಿದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಯ ಕೋರಿದ್ದು ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಹರಪನಹಳ್ಳಿ.